# ಭಾರತೀಯ ಪತ್ರಿಕಾ ಮಂಡಳಿಯ ಅಧ್ಯಕ್ಷರಾಗಿ

# ನ್ಯಾಯಮೂರ್ತಿ ಮಾರ್ಕಾಂಡೇ ಕಟ್ಜು ಯಾಕೆ ನಿರ್ಗಮಿಸಬೇಕು

ಅರುಣ್ ಜೇಟ್ಲಿ

ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶ ಹಾಗೂ ಹಾಲಿ ಪತ್ರಿಕಾ ಮಂಡಳಿ ಅಧ್ಯಕ್ಷ ನ್ಯಾಯಮೂರ್ತಿ ಮಾರ್ಕಾಂಡೇಯ ಕಟ್ಜು ಅವರು ಎರಡು ಜನಪ್ರಿಯ ಕಾಂಗ್ರೆಸ್ಸೇತರ ರಾಜ್ಯ ಸರ್ಕಾರಗಳ ವಿರುದ್ಧ ಪಕ್ಷಪಾತದ ಹೇಳಿಕೆಯನ್ನು ಕಳೆದ ವಾರ ನೀಡಿದ್ದನ್ನು ನಾವು ಕಂಡಿದ್ದೇವೆ. ಭಾರತೀಯ ಪತ್ರಿಕಾ ಮಂಡಳಿಯ ಪರವಾಗಿ ಬಿಡುಗಡೆ ಮಾಡಿದ ಕರಡು ವರದಿಯಲ್ಲಿ ಅವರು ಬಿಹಾರಿನಲ್ಲಿ ಮಾಧ್ಯಮಗಳು ಸ್ವಾತಂತ್ರ್ಯ ಹೊಂದಿಲ್ಲವೆಂಬ ಹೇಳಿಕೆ ನೀಡಿದರು. ನಂತರ, ದಿ ಹಿಂದು ಪತ್ರಿಕೆಯಲ್ಲಿ ಬರೆದ ಲೇಖನದಲ್ಲಿ ಅವರು ಗುಜರಾತ್ ಸರ್ಕಾರ ಮತ್ತು ಅದರ ಮುಖ್ಯ ಮಂತ್ರಿ ನರೇಂದ್ರ ಮೋದಿಯವರ ವಿರುದ್ಧ ಟೀಕೆಗಳನ್ನು ಮಾಡಿದ್ದರು.

ಮೊದಮೊದಲು ತಮ್ಮ ಪಾಂಡಿತ್ಯಕ್ಕೆ ಹೆಸರಾಗಿದ್ದ ನ್ಯಾಯಮೂರ್ತಿ ಕಟ್ಜು ಅವರು ಎಂದಿಗೂ ಸಾಂಪ್ರದಾಯಿಕ ಅಲೋಚನೆಗಳನ್ನು ಹೊಂದಿದ ನ್ಯಾಯಾಧೀಶರಾಗಿರಲಿಲ್ಲ. ನ್ಯಾಯಾಧೀಶರಾಗಿ ಮತ್ತು ಅದರ ನಂತರ, ಅವರ ಹೇಳಿಕೆಗಳು ಸ್ಪಷ್ಟವಾಗಿ ಅನಪೇಕ್ಷಣೀಯ. ಸೌಜನ್ಯಪೂರ್ಣ ಹೇಳಿಕೆಗಳನ್ನು ನೀಡುವ ಸ್ವಭಾವ ಅವರದ್ದಲ್ಲ. ಕಾಂಗ್ರೆಸ್ಸೇತರ ಸರ್ಕಾರಗಳಾದ ಪಶ್ಚಿಮ ಬಂಗಾಳ, ಬಿಹಾರ್ ಅಥವಾ ಗುಜರಾತ್ ವಿರುದ್ಧ ಅವರು ನೀಡಿರುವ ಹೇಳಿಕೆಗಳು ವಂದನಾ ಪೂರ್ವಕ ಹೇಳಿಕೆಗಳಾಗಿದ್ದು, ನಿವೃತ್ತಿಯ ನಂತರ ಉದ್ಯೋಗದಾತರಿಗೆ ಸಲ್ಲಿಸುವಂತಿದೆ.

ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯದ ನ್ಯಾಯಾಧೀಶರು ತಮ್ಮ ನಿವೃತ್ತಿಯ ನಂತರ ಮರುನೇಮಕಾತಿಗೆ ಅರ್ಹತೆ ಹೊಂದಿರಬಾರದು ಎಂಬ ಬಲವಾದ ನಂಬಿಕೆ ನನ್ನದು. ಕೆಲವು ಪ್ರಕರಣಗಳಲ್ಲಿ, ನಿವೃತ್ತಿ ನಂತರದ ಉದ್ಯೋಗಾಕಾಂಕ್ಷೆಯಿಂದ ವಿಚಲಿತಗೊಂಡು ನ್ಯಾಯಿಕ ನಡವಳಿಕೆ ಪ್ರಭಾವಕ್ಕೆ ಒಳಗಾಗಿರುವ ಸಂದರ್ಭಗಳಿವೆ. ಹೀಗಿದ್ದರೂ ಕೂಡ, ನ್ಯಾಯಮಂಡಳಿಗಳು ಮತ್ತು ಅನ್ಯ ಅರೆ–ನ್ಯಾಯಿಕ ಹುದ್ದೆಗಳಿಗೆ ನಿವೃತ್ತ ನ್ಯಾಯಾಧೀಶರನ್ನೇ ನೇಮಿಸುವ ವ್ಯವಸ್ಥೆಯನ್ನು ಅನುಸರಿಸುತ್ತಿದ್ದೇವೆ. ಭಾರತೀಯ ಪತ್ರಿಕಾ ಮಂಡಳಿಯ ಅಧ್ಯಕ್ಷರಾಗಿ ಸದಾ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರನ್ನೇ ನೇಮಕ ಮಾಡುವ ಪರಿಪಾಠ ಬೆಳೆದು ಬಂದಿದೆ. ಪತ್ರಿಕಾ ಸ್ವಾತಂತ್ರ್ಯ, ಈ ಸ್ವಾತಂತ್ರ್ಯದ ಚ್ಯುತಿ ಹಾಗೂ ಮಾಧ್ಯಮಗಳ ವರದಿ ಮತ್ತು ವಿಶ್ಲೇಷಣೆಯಲ್ಲಿ ಕಂಡುಬರುವ ವೃತ್ತಿಪರತೆಯ ಕೊರತೆ ಬಗ್ಗೆ ಉದ್ಭವಿಸುವ ವಿಚಾರಗಳಲ್ಲಿ ಅವರು ತಮ್ಮ ಅಭಿಪ್ರಾಯ ನೀಡಬೇಕಾಗುತ್ತದೆ. ಪತ್ರಿಕಾ ಮಂಡಳಿ ಅಧ್ಯಕ್ಷರು ಶಾಸನಾತ್ಮಕ ಹುದ್ದೆಯ ಜವಾಬ್ದಾರಿಯನ್ನು ನಿಭಾಯಿಸಬೇಕಾಗುತ್ತದೆ. ನ್ಯಾಯ, ನಿಷ್ಪಕ್ಷಪಾತ ಹಾಗೂ ರಾಜಕೀಯ ವಿಚಾರಗಳಲ್ಲಿ ತಟಸ್ಥ ನಿಲವು ತಾಳುವುದು ಅವರ ಹುದ್ದೆಯ ಆವಶ್ಯಕತೆಯಾಗಿದೆ. ಜೊತೆಗೆ, ಹಾಲಿ ಅಥವಾ ನಿವೃತ್ತ ನ್ಯಾಯಾಧೀಶರು ಘನತೆ, ಸಜ್ಜನಿಕೆ ಹಾಗೂ ಸಮಚಿತ್ತರಾಗಿ

ನಡೆದುಕೊಳ್ಳುವುದು ಅತ್ಯಾವಶ್ಯಕ. ಏರು ಧನಿಯ ಮಾತು, ನಯವಂಚನೆ, ಅನಪೇಕ್ಷಣೀಯ ನುಡಿ ಅಥವಾ ಆಚರಣೆ ಇಲ್ಲವೇ ಸ್ವಪ್ರತಿಷ್ಠೆಗಳು ನ್ಯಾಯಾಧೀಶರಿಗೆ ಶೋಭೆ ತರುವುದಿಲ್ಲ. ನ್ಯಾಯಾಧೀಶರು ನ್ಯಾಯಾಂಗದ ಉದ್ದೇಶಪೂರ್ತಿಗೆ ನಿರ್ವಹಿಸುವ ಜವಾಬ್ದಾರಿಗಳಿಗೆ ಉದ್ದೇಶಗಳನ್ನು ಹುಡುಕುವಂತಿಲ್ಲ. ನ್ಯಾಯಾಲಯದ ತೀರ್ಪುಗಳನ್ನು ಟೀಕಿಸುವಾಗಲು ಗರಿಷ್ಠ ಹತೋಟಿವಹಿಸುವುದು ಆವಶ್ಯಕ. ಟೀಕೆಗಳು ಚರ್ಚೆಯ ವಿಷಯವಾಗಬಹುದೆ ಹೊರತು ವೈಯಕ್ತಿಕವಾಗಬಾರದು. ನ್ಯಾಯಿಕ ಅಥವಾ ಅರೆ ನ್ಯಾಯಿಕ ಜವಾಬ್ದಾರಿಗಳನ್ನು ವಹಿಸುವಾಗ ರಾಜಕೀಯ ವಿವಾದಗಳಲ್ಲಿ ಭಾಗಿಯಾಗದೆಯಿರುವುದು ಮೂಲ ತತ್ವವಾಗಿದೆ. ರಾಜಕೀಯ ಚಟುವಟಿಕೆಗಳು ಅಥವಾ ರಾಜಕೀಯ ಚರ್ಚೆಯಲ್ಲಿ ಭಾಗವಹಿಸಲು ಇಚ್ಛಿಸುವವರು, ನ್ಯಾಯಿಕ ಅಥವಾ ಅರೆ–ನ್ಯಾಯಿಕ ಹುದ್ದೆಯನ್ನು ತೊರೆಯಬೇಕು. ಆಗ ಅವರ ಅಭಿಪ್ರಾಯಗಳ ಕುರಿತು ಮಾಡಲಾಗುವ ವಿಮರ್ಶೆ ಹಾಗೂ ಟಿಪ್ಪಣಿಗಳ ಹರಿತ, ರಾಜಕಾರಣಿಗಳಿಗೆ ಅನ್ವಯವಾಗುವಂತಿರುತ್ತದೆ.

ಹಾಲಿ ಅಥವಾ ನಿವೃತ್ತ ನ್ಯಾಯಾಧೀಶರು ಮೈಗೂಡಿಸಿಕೊಳ್ಳಬೇಕಾದ ಯಾವುದೇ ಗುಣಲಕ್ಷಣವನ್ನು ನ್ಯಾಯಾಧೀಶರಾದ ಮರ್ಕಾಂಡೇಯ ಕಟ್ಜು ಹೊಂದಿಲ್ಲ. ಅವರು ಆಡಲು ಬಯಸುವ ವಿಚಾರಗಳು ಮತ್ತು ಗುರಿಪಡಿಸುವ ವ್ಯಕ್ತಿಗಳು ರಾಜಕೀಯ ಇಚ್ಛೆಗಳಿಂದ ಪ್ರೇರಿತಗೊಂಡಿವೆ.  ನಿವೃತ್ತಿ ನಂತರದ ಉದ್ಯೋಗ ನೀಡಲು ಕಾರಣಕರ್ತರಾದವರ ಕುರಿತು ಅಗತ್ಯಕ್ಕಿಂತ ಹೆಚ್ಚಿನ ಮೃದು ಮಾತುಗಳನ್ನು ಆಡುತ್ತಾರೆ. ನಾಯಕತ್ವ ಸೃಷ್ಟಿಯ ಮಾನದಂಡವು ವ್ಯಕ್ತಿಯ ಪ್ರತಿಭೆಯಾಗಿರದೆ, ವಂಶಾವಳಿಯನ್ನು ಅವಲಂಬಿಸಿರುತ್ತದೆ ಎಂಬ ಅನಿಸಿಕೆಯನ್ನು ಅವರಿಂದ ಕೇಳುವುದೊಂದು ಬಾಕಿಯಿದೆ. ಭಾರತವನ್ನು ವಂಶಾವಳಿ ಪ್ರಜಾಪ್ರಭುತ್ವದ ರೂಪದಲ್ಲಿ ಮಾರ್ಪಡಿಸಲು ಇಚ್ಛಿಸುವವರೆ ನುಡಿಯಲು ಸಂಕೋಚ ಪಡುವ ಹೇಳಿಕೆ ಇದಾಗಿದೆ. 2ಜಿ ತರಂಗಾಂತರ ಹಂಚಿಕೆಯಿಂದ ಆರಂಭಗೊಂಡು ಕಲ್ಲಿದ್ದಲು ನಿಕ್ಷೇಪ ಹಂಚಿಕೆಯವರೆಗು ಯುಪಿಎ ಸರ್ಕಾರದಲ್ಲಿ ಘಟಿಸಿದ ಎಲ್ಲಾ ಭ್ರಷ್ಟಾಚಾರ ಪ್ರಕರಣಗಳ ವಿಚಾರದಲ್ಲಷ್ಟೇ ನ್ಯಾಯಾಧೀಶ ಕಟ್ಜು ಅವರಲ್ಲಿ ಹುದುಗಿರುವ ಸಂಘರ್ಷದ ಮನೋಭಾವ ಸುಪ್ತವಾಗಿರುತ್ತದೆ. ಬಿಹಾರಿನಲ್ಲಿ ಕಂಡುಬಂದಿರುವ ರಾಜಕೀಯ ಬದಲಾವಣೆಗಳ ಕುರಿತು ಮತ್ತು ಅಭಿವೃದ್ಧಿಯೇ ರಾಜಕೀಯ ಇಚ್ಛಾಶಕ್ತಿಯ ಪ್ರಮುಖ ಕೇಂದ್ರವಾಗಿರುವ ಬಗ್ಗೆ  ದೇಶೀಯ ಹಾಗೂ ಅಂತಾರಾಷ್ಟ್ರೀಯ ಸಮುದಾಯಗಳಿಂದ ಮೆಚ್ಚುಗೆಯ ಮಾತುಗಳು ಕೇಳಿಬಂದಾಗ, ಪತ್ರಿಕಾ ಸ್ವಾತಂತ್ರ್ಯದ ಕೊರತೆ ಕಂಡುಬಂದಿದೆ ಎಂಬ ಹೇಳಿಕೆ ನೀಡಿ, ಬಿಹಾರ್ ಸರ್ಕಾರ ಹಾಗೂ ನಿತಿಷ್ ಕುಮಾರ್ ಅವರನ್ನು ಗುರಿಪಡಿಸುತ್ತಾರೆ.

ಗುಜರಾತ್ ಮುಖ್ಯ ಮಂತ್ರಿ ನರೇಂದ್ರ ಮೋದಿಯವರನ್ನು ಕುರಿತು 'ದಿ ಹಿಂದು' ಪತ್ರಿಕೆಯಲ್ಲಿ ಬರೆದ ಸಹಿಯುಳ್ಳ ಲೇಖನವು ತೇಜೋವಧೆಯ ಸ್ವರೂಪ ಪಡೆದುಕೊಂಡಿದೆ. ಗೋದ್ರಾದಲ್ಲಿ ಸಾಬರ್ಮತಿ ಎಕ್ಸಪ್ರೆಸ್ ರೈಲು ಅಗ್ನಿಗೆ ಆಹುತಿಯಾದ ಘಟನೆಯ ಕುರಿತು ಹೇಳುವಾಗ,

"ಗೋಧ್ರಾ ಕಾಂಡದಲ್ಲಿ ಘಟಿಸಿದ್ದೇನು ಎಂಬುದು ಈಗಲೂ ರಹಸ್ಯವಾಗಿ ಉಳಿದಿದೆ" ಎಂಬ ಅನಿಸಿಕೆ ವ್ಯಕ್ತಪಡಿಸುವ ಮೂಲಕ ಅವರು ರಾಜಕೀಯ ಪಕ್ಷಪಾತದೊಂದಿಗೆ ವರ್ತಿಸುವುದು ಸ್ಪಷ್ಟಪಡುತ್ತದೆ. ರೈಲುಗಾಡಿಗೆ ಬೆಂಕಿ ಹಚ್ಚಿ, ಹಲವರ ಸಾವು ಮತ್ತು ಅನ್ಯ ಕೆಲವರಿಗೆ ಗಾಯಗಳಾಗಲು ಕಾರಣರಾದ ಅಪರಾಧಿಗಳ ಪರ ವಕಾಲತು ಮಾಡುವ ಪ್ರಯತ್ನವನ್ನು ನ್ಯಾಯಮೂರ್ತಿ ಮಾರ್ಕಾಂಡೆ ಕಟ್ಜು ಮಾಡುತ್ತಿದ್ದಾರೆ. ಈ ಪ್ರಕರಣದಲ್ಲಿ ಅಧೀನ ನ್ಯಾಯಾಲಯವು ಈಗಾಗಲೆ ಹಲವರಿಗೆ ಶಿಕ್ಷೆ ವಿಧಿಸಿದ್ದು, ಅವರ ಮೇಲ್ಮನವಿ ಇತ್ಯರ್ಥವಾಗದೆ ಬಾಕಿಯಿರುವಾಗ, ಸರ್ವೋಚ್ಚ ನ್ಯಾಯಾಲಯದ ಮಾಜಿ ನ್ಯಾಯಾಧೀಶರು ಮತ್ತು ಹಾಲಿ ಶಾಸನಬದ್ಧ ಹುದ್ದೆಯಲ್ಲಿರುವವರು ಈ ಅಂಶಗಳನ್ನು ನಿರ್ಲಕ್ಷಿಸಬಹುದೆ?

ಯಾವುದೇ ನ್ಯಾಯಿಕ ಪ್ರಾಧಿಕಾರವು ಈವರೆಗು ನರೇಂದ್ರ ಮೋದಿಯವರ ವಿರುದ್ಧ ತೀರ್ಪು ನೀಡಿಲ್ಲವೆಂಬ ಹೇಳಿಕೆಯನ್ನು ಅವರು ನೀಡಿದ್ದಾರೆ. ನ್ಯಾಯಿಕ ತೀರ್ಪಿನ ಬದಲು ಕಟ್ಟೆ ಪುರಾಣಕ್ಕೆ ಹೆಚ್ಚಿನ ಮಾನ್ಯತೆ ನೀಡಿರುವ ಅವರು ಕೆಳಕಂಡಂತೆ ಹೇಳಿಕೆ ನೀಡಿದ್ದಾರೆ:- "ನಮ್ಮ ನ್ಯಾಯಾಂಗದ ಕುರಿತು ಹೇಳಿಕೆ ನೀಡಲು ಬಯಸುವುದಿಲ್ಲ, ಆದರೆ 2002ರ ಪ್ರಕರಣದಲ್ಲಿ ಶ್ರೀ ಮೋದಿಯವರ ಕೈವಾಡವಿರಲಿಲ್ಲ ಎಂಬ ಕಥೆಯನ್ನು ಒಪ್ಪಲು ಖಂಡಿತವಾಗಿಯೂ ಸಾಧ್ಯವಿಲ್ಲ".

ಗುಜರಾತಿನಲ್ಲಿ ಸಾಧಿಸಲಾದ ಅಭಿವೃದ್ಧಿ ಕಾರ್ಯಗಳನ್ನು ಕಡೆಗಣಿಸಿದ ಅವರು ಮೋದಿ ಹಾಗೂ ಗುಜರಾತಿನ ವಿರುದ್ಧ ತಮ್ಮ ವಾಗ್ದಾಳಿಯನ್ನು ಮುಂದುವರಿಸುತ್ತಾ, ಹೀಗೆ ನುಡಿಯುತ್ತಾರೆ:- "ಬೃಹತ್ ಕೈಗಾರಿಕಾ ಸಮೂಹಗಳಿಗೆ ವಿನಾಯತಿ ನೀಡುತ್ತಾ, ಅಗ್ಗದ ದರದಲ್ಲಿ ಭೂಮಿ ಮತ್ತು ವಿದ್ಯುತ್ ನೀಡಿಲಾಗಿದ್ದು, ಅದರಿಂದ ಜನಸಾಮಾನ್ಯರ ಜೀವನ ಸುಧಾರಿಸದೆಯದ್ದ ಪಕ್ಷದಲ್ಲಿ, ಅದನ್ನು ಅಭಿವೃದ್ಧಿಯೆಂದು ಕರೆಯಲು ಸಾಧ್ಯವಿಲ್ಲ." ತಮ್ಮ ವಾದವನ್ನು ಸಮರ್ಥಿಸಿಕೊಳ್ಳಲು, ಅನುಕೂಲಕ್ಕೆ ತಕ್ಕಂತೆ ಅಂಕಿ-ಅಂಶಗಳನ್ನು ಆಯ್ದುಕೊಂಡು ಮಾತನಾಡಿದ್ದಾರೆ. ದೇಶಕ್ಕೆ ಸ್ವಾತಂತ್ರ ದೊರೆತಾಗ ಗುಜರಾತ್ ರಾಜ್ಯ ಕನಿಷ್ಠ ಪ್ರಮಾಣದ ಸಾಮಾಜಿಕ ಸೂಚಕಗಳನ್ನು ಹೊಂದಿತ್ತು ಮತ್ತು ಇಂದು ಆ ರಾಜ್ಯವು ಮೆಚ್ಚುವಂತಹ ಸಾಮಾಜಿಕ ಸೂಚಕಗಳನ್ನು ಹೊಂದಿದೆ ಎಂದು ಪ್ರೊ.ಜಗದೀಶ್ ಭಗವತಿ ಹಾಗೂ ಡಾ.ಅರವಿಂದ್ ಪನಗರಿಯ ಅವರು ಇತ್ತೀಚೆಗಷ್ಟೆ ಪ್ರಕಟಗೊಳಿಸಿದ ಪುಸ್ತಕದಲ್ಲಿ ಅಭಿಪ್ರಾಯ ಪಟ್ಟಿದ್ದಾರೆ. ಸಾಕ್ಷರತೆ 1951ರಲ್ಲಿದ್ದ ಶೇಕಡ 22ರಿಂದ ಹಾಗೂ 2001ರಲ್ಲಿದ್ದ ಶೇಕಡ 69ರಿಂದ ಈಗ 2011ರಲ್ಲಿ 79ಕ್ಕೆ ಏರಿದೆ. ಶಿಶು ಮರಣ ಪ್ರಮಾಣವು 1971ರಲ್ಲಿ 1000ಕೆ 144ಆಗಿದ್ದು, 2001ರಲ್ಲಿ 60ರಷ್ಟಿತ್ತು, ಅದೇ 2011ರಲ್ಲಿ ಈ ಪ್ರಮಾಣ 41ಕ್ಕೆ ಇಳಿಮುಖ ಕಂಡಿದೆ. ಕಟ್ಜು ಅವರು ಗುಜರಾತವನ್ನು ಕಾಮಾಲೆ ಕಣ್ಣಿನಿಂದ ನೋಡಿದ್ದಾರೆ.

ತಮ್ಮ ಲೇಖನವನ್ನು ನ್ಯಾಯಾಧೀಶ ಕಟ್ಜು ಅವರು ರಾಜಕೀಯ ಮನವಿಯೊಂದಿಗೆ ಅಂತ್ಯಗೊಳಿಸಿದ್ದಾರೆ. ಅದೇನೆಂದರೆ, "ರಾಷ್ಟ್ರದ ಭವಿಷ್ಯದ ಕುರಿತು ನಿಜವಾದ ಕಾಳಜಿ ಉಳ್ಳವರು, ಈ ಎಲ್ಲಾ ಅಂಶಗಳನ್ನು ಪರಿಗಣಿಸಬೇಕೆಂದು ನನ್ನ ಮನವಿ, ಇಲ್ಲವಾದರೆ 1933ರಲ್ಲಿ ಜರ್ಮನಿಯ ತಪ್ಪನ್ನೇ ನೀವು

ಮಾಡಿದಂತಾಗುತ್ತದೆ." ತಮ್ಮ ರಾಜಕೀಯ ದೃಷ್ಟಿಕೋನವನ್ನು ವ್ಯಕ್ತಪಡಿಸುವ ಹಕ್ಕು ನ್ಯಾಯಾಧೀಶ ಕಟ್ಜು ಅವರಿಗಿದೆ ಎಂದು ನಾನೂ ಒಪ್ಪುತ್ತೇನೆ, ಆದರೆ, ಅರೆ–ನ್ಯಾಯಿಕ ಸಂಸ್ಥೆಯಲ್ಲಿ ಕಾರ್ಯವಹಿಸುವ ವ್ಯಕ್ತಿ ರಾಜಕೀಯ ಚಟುವಟಿಕೆಗಳಲ್ಲಿ ನೇರವಾಗಿ ಭಾಗಿಯಾಗಬಹುದೇ? ಅವರ ಮನವಿಯು ರಾಜಕೀಯ ಬಣ್ಣವನ್ನು ಲೇಪಿಸಿಕೊಂಡಿದೆ. ಕಾಂಗ್ರೆಸ್‌ಗಿಂತಲು ಹೆಚ್ಚಿನ ಕಾಂಗ್ರೆಸ್‌ತನವನ್ನು ಹೊಂದಿರುವಂತಿದೆ. ಸರ್ವೋಚ್ಚ ನ್ಯಾಯಾಲಯದ ಓರ್ವ ಹಾಲಿ ನ್ಯಾಯಾಧೀಶ, ರಾಜಕೀಯದಲ್ಲಿ ನೇರವಾಗಿ ಭಾಗವಹಿಸಿ, ರಾಜಕೀಯ ಮನವಿಯನ್ನು ಮಾಡಿದರೆ, ಅಂಥವರು ಛೀಮಾರಿಗೆ ಅರ್ಹರಲ್ಲವೆ. ಓರ್ವ ಅಡಳಿತ ಸೇವಾ ಅಧಿಕಾರಿ ಇದೇ ರೀತಿ ವರ್ತಿಸಿದರೆ ಆತನನ್ನು ವಜಾಗೊಳಿಸುವುದು ಸೂಕ್ತ. ಭಾರತೀಯ ಪತ್ರಿಕಾ ಮಂಡಳಿ ಅಧ್ಯಕ್ಷರ ಅರೆ–ನ್ಯಾಯಿಕ ಸ್ಥಾನಮಾನ ಗ್ರಹಿಸಿರುವ ಮಾಜಿ ನ್ಯಾಯಾಧೀಶರು ನೇರವಾಗಿ ರಾಜಕೀಯದಲ್ಲಿ ಭಾಗವಹಿಸುವ ಮುನ್ನಾ ತಾವಾಗಿಯೇ ಪದತ್ಯಾಗ ಮಾಡಬೇಕು, ಇಲ್ಲವಾದರೆ ಅವರನ್ನು ವಜಾಗೊಳಿಸಬೇಕು. ನಿವೃತ್ತಿಯ ನಂತರ, ಲಟೀನ್ ನಿರ್ಮಿತ ಭವ್ಯ ಬಂಗಲೆಯಲ್ಲಿ ವಾಸಿಸಲು ಬಯಸುವ ನಿವೃತ್ತ ನ್ಯಾಯಾಧೀಶರು, ರಾಜಕೀಯ ತಟಸ್ಥ ನಿಲವಿಗೆ ಬದ್ಧರಾಗಬೇಕೆ ಹೊರತು ರಾಜಕೀಯದಲ್ಲಿ ಭಾಗಿಗಳಾಗಬಾರದು.